ಮನೆಗೆ ಬಿಟ್ಟು, ತಾವು ಉಳಿದುಕೊಳ್ಳುತ್ತಿದ್ದ ಮೋತಿ ಮಹಲ್ ಹೋಟೆಲ್‌ಗೆ ತೆರಳಿದರು.

## ಕತೆ ಕಟ್ಟುತ್ತಾನೆ!

ಬೆಂಗಳೂರಿನ ಕಂಠೀರವ ಸ್ಟುಡಿಯೋದಲ್ಲಿ 'ರಂಗನಾಯಕಿ' ಚಿತ್ರದ ಶೂಟಿಂಗ್ ನಡೆಯುತ್ತಿತ್ತು. ನಿರ್ದೇಶಕ ಪುಟ್ಟಣ್ಣ ಕಣಗಾಲ್ ಎಂದಿನಂತೆ ಬೆಳಗ್ಗೆ 9ಕ್ಕೆ ಚಿತ್ರೀಕರಣ ಆರಂಭಿಸಿದ್ದರು. 11ರ ಸುಮಾರಿಗೆ ಅಂಬರೀಷ್ ಸ್ಟುಡಿಯೋಗೆ ಬಂದರು. ದೂರದಿಂದಲೇ ಅವರನ್ನು ಗಮನಿಸಿದ ನಿರ್ದೇಶಕ ಪುಟ್ಟಣ್ಣ, 'ಬಂದ ನೋಡು... ಲೇಟ್ ಆಗಿ ಬಂದು ಈಗ ಏನೇನೋ ಕತೆ ಕಟ್ಟಿಹೇಳ್ತಾನೆ' ಎಂದು ಅಲ್ಲಿದ್ದವರಿಗೆ ಹೇಳಿದರು. ಅಂಬರೀಷ್ ಬಂದರೂ ಅದನ್ನು ಗಮನಿಸದಂತೆ ತಮ್ಮ ಪಾಡಿಗೆ ತಾವು ಕುಳಿತಿದ್ದರು. 'ಹೊತ್ತಾಗಿದೆ, ಎಲ್ರಪ್ಪ ಕಾಸ್ಟ್ಯೂಮ್ ಕೊಡಿ... ಮೇಕಪ್‌ಮ್ಯಾನ್ ಎಲ್ಲಿ?' ಎಂದು ಹುಸಿ ಕೋಪ ಪ್ರದರ್ಶಿಸುತ್ತಾ ಅಂಬರೀಷ್ ವಾತಾವರಣ ತಿಳಿಗೊಳಿಸಲು ಯತ್ನಿಸಿದರು.

ಇದಕ್ಕೂ ಪುಟ್ಟಣ್ಣನವರ ಕಡೆಯಿಂದ ಯಾವುದೇ ಪ್ರತಿಕ್ರಿಯೆ ವ್ಯಕ್ತವಾಗಲಿಲ್ಲ. ಆಗ ಅವರ ಬಳಿಗೆ ಹೋದ ಅಂಬಿ, 'ಏನು ಡೈರೆಕ್ಟ್ರು... ಒಳ್ಳೇ ಸೆಂಟ್ ಹಾಕಿಕೊಂಡು ಬಂದಿದೀರಿ...' ಎಂದು ಕೆಣಕಿದರು. ಕೂಡಲೇ ಎದ್ದು ನಿಂತ ಪುಟ್ಟಣ್ಣ ತಾವು ಕುಳಿತ ಫೋಲ್ಡಿಂಗ್ ಚೇರ್ ಎತ್ತಿಕೊಂಡು ಅಂಬಿಯನ್ನು ಓಡಿಸಿಕೊಂಡು ಹೋದರು. ಸೆಟ್‌ನಲ್ಲಿ ಕೆಲಕ್ಷಣ ಓಡಾಡಿದ ನಂತರ ಕೋಪ–ತಮಾಷೆಯಿಂದಲೇ ಅಂಬಿಯನ್ನು ಬೈಯುತ್ತಾ ಪುಟ್ಟಣ್ಣ ಮತ್ತೆ ಶೂಟಿಂಗ್‌ಗೆ ಮರಳಿದರು. ಹೀಗೆ, ಪ್ರತಿ ದಿನವೂ ಇಂತಹ ಏನಾದರೊಂದು ಪ್ರಸಂಗ ನಡೆಯುತ್ತಿತ್ತು.

ನನಗೆ ತಿಳಿದಮಟ್ಟಿಗೆ ಪುಟ್ಟಣ್ಣನವರಂತಹ ಶಿಸ್ತು, ಕೋಪಿಷ್ಠ ನಿರ್ದೇಶಕರೊಂದಿಗೆ ಅಷ್ಟೊಂದು ಸಲಿಗೆಯಿಂದ ಇರುತ್ತಿದ್ದುದು ಅಂಬರೀಷ್ ಒಬ್ಬರೇ. ಪುಟ್ಟಣ್ಣನವರಿಗೂ ಅಂಬಿ ಮೇಲೆ ವಿಶೇಷ ಪ್ರೀತಿಯಿತ್ತು. ಅವರ ಮೇಲೆ ಕೋಪ ಮಾಡಿಕೊಂಡರೂ ಬೇಗ ಸರಿಹೋಗಿಬಿಡುತ್ತಿದ್ದರು. 'ನಟ ಅಂಬರೀಷ್'ರಲ್ಲಿನ ಮುಗ್ಧತೆ ಅವರಿಗೆ ಇಷ್ಟವಾಗುತ್ತಿತ್ತು. ಹಾಗಾಗಿ ತಮ್ಮ ಹಲವಾರು ಸಿನಿಮಾಗಳಲ್ಲಿ ಅಂಬಿಗೆ ಪಾತ್ರಗಳನ್ನು ಕೊಟ್ಟು ಚೆನ್ನಾಗಿ ದುಡಿಸಿಕೊಂಡರು. ಅಂಬರೀಷ್ ಕೂಡ ತಾವೊಬ್ಬ ಸ್ಟಾರ್ ಎಂದು ಬೀಗದೆ ಪುಟ್ಟಣ್ಣನವರು ಸೃಷ್ಟಿಸಿದ ಪುಟ್ಟ ಪಾತ್ರಗಳಲ್ಲಿ ನಟಿಸುತ್ತಾ ಬಂದರು. ಇವು ಸ್ಮರಣೀಯ ಪಾತ್ರಗಳಾಗಿ ಉಳಿದಿವೆ.

## ಟೀವಿ ಒಡೆದು ಹಾಕಿದ್ರು!

ಕಂಠೀರವ ಸ್ಟುಡಿಯೋದಲ್ಲಿ ಅಂಬರೀಷ್ ಚಿತ್ರವೊಂದರ ಶೂಟಿಂಗ್ ನಡೆಯುತ್ತಿತ್ತು. ಪಕ್ಕದ ಫ್ಲೋರ್‌ನಲ್ಲಿ ನಡೆಯುತ್ತಿದ್ದ ಮತ್ತೊಂದು ಸಿನಿಮಾಗೆ ನಾನು ಕೆಲಸ ಮಾಡುತ್ತಿದ್ದೆ. ಅಂದು ಭಾರತ ಮತ್ತು ಪಾಕಿಸ್ತಾನ ನಡುವಿನ ಕ್ರಿಕೆಟ್ ಮ್ಯಾಚ್. ಅಂಬರೀಷ್ ಕುತೂಹಲದಿಂದ ಪದೇ ಪದೇ ಯಾರ್‍ಯಾರಿಗೋ ಕರೆ ಮಾಡಿ ಸ್ಕೋರ್ ಕೇಳುತ್ತಿದ್ದರು. ಇದನ್ನು ನೋಡಿದ ನಿರ್ದೇಶಕರಿಗೆ ಪಾಪ ಎನಿಸಿತು. ಸ್ಟುಡಿಯೋ ಹತ್ತಿರದಲ್ಲೇ ಇದ್ದ ತಂತ್ರಜ್ಞರೊಬ್ಬರ ಮನೆಯಿಂದ ಪುಟ್ಟ ಟೀವಿಯೊಂದನ್ನು ತರಿಸಿ ಅಲ್ಲೇ ಕ್ರಿಕೆಟ್ ವೀಕ್ಷಿಸುವ ಅವಕಾಶ ಕಲ್ಪಿಸಿದರು. ಶೂಟಿಂಗ್ ಬಿಡುವಿನಲ್ಲಿ ಟೀವಿ ಎದುರು ಕುಳಿತು ಉತ್ಸಾಹದಿಂದ ಕಿರುಚುತ್ತಿದ್ದ ಅಂಬರೀಷ್‌ಗೆ ಅಲ್ಲಿದ್ದವರೂ ಸಾಥ್ ನೀಡಿದ್ದರು.

ಭಾರತ ತಂಡ ಗೆಲ್ಲುವ ಸೂಚನೆ ನೀಡಿತ್ತು. ಇದರಿಂದ ಅಂಬಿ ಹುಮ್ಮಸ್ಸಿನಲ್ಲಿದ್ದರು. ಕೊನೆಗೆ ಗೆಲುವಿನ ಸಮೀಪ ಬಂದು ಮುಗ್ಗರಿಸಿ ಭಾರತ ತಂಡ ಸೋತಿತು. ಸಿಟ್ಟಿಗೆದ್ದ ಅಂಬರೀಷ್ ಟೀವಿಯನ್ನು ಮೇಲೆತ್ತಿ ಕೆಳಗೆಸೆದು ಒಡೆದುಹಾಕಿದರು. ಒಂದಷ್ಟು ಹೊತ್ತು ಅಲ್ಲಿ ಯಾರೂ ಮಾತನಾಡಲಿಲ್ಲ. ಅರ್ಧ ಗಂಟೆ ನಂತರ ಅಲ್ಲಿಗೆ ಬಂದ ಅಂಬಿ, 'ಯಾರದ್ದೋ ಈ ಟೀವಿ?' ಎಂದು ಪ್ರಶ್ನಿಸಿದರು. ಮುಂದೆ ಬಂದ ತಂತ್ರಜ್ಞನ ಕೈಗೆ ದುಡ್ಡು ಇಟ್ಟು ಹೊಸ ಟೀವಿ ಕೊಳ್ಳಲು ಹೇಳಿಹೋದರು.

ಅಂಬರೀಷ್ ಶೂಟಿಂಗ್‌ಗೆ ತಡವಾಗಿ ಬರುತ್ತಾರೆ ಎನ್ನುವುದು ಎಲ್ಲರಿಗೂ ತಿಳಿದದ್ದೇ. ಹಾಗಾಗಿ ಅವರ ವೇಳೆಗೆ ತಮ್ಮ ಚಿತ್ರೀಕರಣವನ್ನು ಹೊಂದಿಸಿಕೊಳ್ಳುತ್ತಿದ್ದರು. ಬೆಳಗ್ಗೆ ಇತರೆ ಸನ್ನಿವೇಶಗಳನ್ನು ಚಿತ್ರಿಸಲು ಯೋಜನೆ ರೂಪಿಸುತ್ತಿದ್ದರು. ಇನ್ನು ಸೆಟ್‌ನಲ್ಲಿ ಅಂಬಿ ಜಾಲಿಬಾಯ್ ಇದ್ದಂತೆ ಇರುತ್ತಿದ್ದರು. ಹಿರಿಕಿರಿಯ ಕಲಾವಿದರು, ತಂತ್ರಜ್ಞರೆನ್ನದೆ ಎಲ್ಲರೊಂದಿಗೆ ಬೆರೆಯುವುದು ಅವರ ಸ್ವಭಾವ. ಊಟೋಪಚಾರದ ಬಗ್ಗೆ ವಿಶೇಷ ಡಿಮ್ಯಾಂಡ್ ಇರುತ್ತಿರಲಿಲ್ಲ. ಎಲ್ಲರೊಂದಿಗೆ ಊಟ ಮಾಡುತ್ತಿದ್ದರು. ಕೆಲವೊಮ್ಮೆ ಪ್ರೊಡಕ್ಷನ್‌ನವರೇ ಅವರಿಗಿಷ್ಟವಾದ ನಾನ್–ವೆಜ್ ತರಿಸಿಕೊಡುತ್ತಿದ್ದರು. ಕಾರ್ಮಿಕರು, ತಂತ್ರಜ್ಞರ ಹಣಕಾಸಿನ ತೊಂದರೆಗಳಿಗೆ ಮಿಡಿಯುತ್ತಿದ್ದ ಅಂಬಿಗೆ ಶೂಟಿಂಗ್ ಬಿಡುವಿನಲ್ಲಿ ಕಾರ್ಡ್ಸ್ ಆಡುವುದು ನೆಚ್ಚಿನ ಹವ್ಯಾಸವಾಗಿತ್ತು.



ಪ್ರಾಣ ಸ್ನೇಹಿತ ವಿಷ್ಣುವರ್ಧನ್ ಜೊತೆ ಅಂಬರೀಷ್

## ಸುಮ್ನೆ ಕುತ್ಕೋಳ್ರೀ, ನಂಗೆ ಗೊತ್ತಿದೆ!

ಹಿರಿಯ ನಟ ಕೆ.ಎಸ್. ಅಶ್ವತ್ಥ್ ಅವರು ನನ್ನೊಂದಿಗೆ ಹಂಚಿಕೊಂಡ ಪ್ರಸಂಗವೊಂದು ತುಂಬಾ ತಮಾಷೆಯಾಗಿದೆ. ಅಶ್ವತ್ಥ್ ಮೈಸೂರು ನಿವಾಸಿ. ಆರಂಭದಲ್ಲಿ ನಟ ಅಂಬರೀಷ್ ಕೂಡ ಮೈಸೂರಿನಲ್ಲೇ ನೆಲೆಸಿದ್ದರು. ಒಮ್ಮೆ ಶೂಟಿಂಗ್ ನಿಮಿತ್ತ ಇಬ್ಬರೂ ಮೈಸೂರಿನಿಂದ ಬೆಂಗಳೂರಿಗೆ ಬರುವುದಿತ್ತು. 'ನೀವು ಬೆಂಗಳೂರಿಗೆ ಪ್ರತ್ಯೇಕವಾಗಿ ಹೋಗೋದೇಕೆ? ನನ್ ಜೊತೆ ಕಾರಿನಲ್ಲಿ ಬಂದ್ಬಿಡಿ' ಎಂದು ಅಂಬರೀಷ್, ಅಶ್ವತ್ಥ್‌ರನ್ನು ಆಹ್ವಾನಿಸಿದ್ದರಂತೆ. ಆ ಕರೆಗೆ ಓಗೊಟ್ಟ ಅಶ್ವತ್ಥ್, ಅಂಬಿ ಕಾರನ್ನು ಏರಿದ್ದಾರೆ.

ಏರು ಯೌವನದ ಅಂಬರೀಷ್‌ಗೆ ಆಗ ಕಾರುಗಳ ಬಗ್ಗೆ ವಿಪರೀತ ಕ್ರೇಜ್. ರೆಬೆಲ್ ಹೀರೋಗೆ ವೇಗವಾಗಿ ಡ್ರೈವ್ ಮಾಡೋದು ಅಂದ್ರೆ ಬಲು ಇಷ್ಟ. ಮೈಸೂರು–ಬೆಂಗಳೂರು ಮಾರ್ಗವನ್ನು ಕಾರಿನಲ್ಲಿ ಅವರು ಒಂದೂವರೆ ಗಂಟೆಯಲ್ಲೇ ಕ್ರಮಿಸುತ್ತಾರೆ ಎನ್ನುವ ಕತೆಗಳೆಲ್ಲಾ ಆಗ ಚಾಲ್ತಿಯಲ್ಲಿದ್ದವು! ಇದು ಗೊತ್ತಿದ್ದೋ ಗೊತ್ತಿಲ್ಲದೆಯೋ ಶಿಸ್ತಿನ ವ್ಯಕ್ತಿ ಅಶ್ವತ್ಥ್ ಕಾರು ಹತ್ತಿದ್ದಾರೆ. ಕಾರು ಹತ್ತಿದ ಹತ್ತೇ ನಿಮಿಷಕ್ಕೆ ಅಂಬರೀಷ್‌ರ ವೇಗ ಅಶ್ವತ್ಥ್‌ರಲ್ಲಿ ನಡುಕ ಹುಟ್ಟಿಸಿದೆ. 'ಬೇಡ ಕಣಯ್ಯಾ, ನಿಧಾನಕ್ಕೆ ಕಾರು ಓಡ್ಸೋ...' ಎಂದಿದ್ದಾರೆ ಅಶ್ವತ್ಥ್. 'ಸುಮ್ನೆ ಕೂತ್ಕೊಳ್ರೀ, ನನಗೆಲ್ಲಾ ಗೊತ್ತಿದೆ. ನಿಮ್ಮನ್ನ ನಾನು ಹುಷಾರಾಗಿ ಕರ್‍ಕೊಂಡು ಹೋಗ್ತೀನಿ' ಎಂದು ತಮ್ಮ ರೆಬೆಲ್ ಶೈಲಿಯಲ್ಲೇ ಅಂಬರೀಶ್ ಗದರಿದ್ದಾರೆ.

ಮಾತು ಕೇಳದ ಅಂಬಿ ಮೇಲೆ ಅಶ್ವತ್ಥ್‌ರಿಗೆ ಕೋಪ, ಮತ್ತೊಂದೆಡೆ ಭಯ. ಆಗ ಅವರಿಗೆ ಒಂದು ಐಡಿಯಾ ಹೊಳೆದಿದೆ. 'ಸ್ವಲ್ಪ ಕಾರು ನಿಲ್ಸಯ್ಯಾ, ನನಗೆ ಮೂತ್ರವಿಸರ್ಜನೆಗೆ ಅರ್ಜೆಂಟ್ ಆಗಿದೆ' ಎಂದಿದ್ದಾರೆ. ಅಂಬಿ ಕಾರು ನಿಲ್ಲಿಸಿದಾಗ ಕೆಳಗಿಳಿದ ಅಶ್ವತ್ಥ್, 'ನಿನಗೆ ದೊಡ್ಡದೊಂದು ನಮಸ್ಕಾರ! ಇನ್ಮೇಲೆ ನಿನ್ನ ಕಾರು ಹತ್ತೋಲ್ಲ...' ಎಂದಿದ್ದಾರೆ. ಅವರ ಅದೃಷ್ಟಕ್ಕೆ ಅದೇ ವೇಳೆಗೆ ರಸ್ತೆಯಲ್ಲಿ ಮೈಸೂರು–ಬೆಂಗಳೂರು ಬಸ್ ಕಾಣಿಸಿ, ಕೈ ಅಡ್ಡ ಹಾಕಿದವರೇ ಬಸ್ ಹತ್ತಿಕೊಂಡು ಬೆಂಗಳೂರಿಗೆ ಬಂದರಂತೆ.